ದಿನಾಂಕಃ 13-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- 1 ನೇ ಪ್ರತಿವಾದಿ ಪರವಾಗಿ ಶ್ರೀ. ಎಸ್.ಕೆ.ಎನ್. ವಕೀಲರಿಂದಃ-**

ನನ್ನ ತಂದೆ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ನನ್ನ ತಾಯಿ ಗೃಹಿಣಿ. ನಾನು ಸಹ ಗೃಹಿಣಿಯಾಗಿದ್ದೇನೆ. ನನ್ನ ಗಂಡ ಚಿಲ್ಲರೆ ಅಂಗಡಿ ವ್ಯಾಪಾರವನ್ನು ತುಂಬಾಡಿ ಗ್ರಾಮದಲ್ಲಿ ಮಾಡುತ್ತಾರೆ. ದಿಃ 21.11.2002 ರಂದು ನನ್ನ ತಂದೆ, ತಾಯಿ, ಹಾಗೂ ಅಣ್ಣ ತಮ್ಮಂದಿರು ಕೂಡಿ ನನ್ನ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು, ನನ್ನ ತಂದೆ ತಾಯಿಯವರು ಮಾತ್ರ ಮದುವೆ ಮಾಡಿಕೊಟ್ಟಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಆ ಮದುವೆಯ ಎಲ್ಲಾ ತಯಾರಿಗಳನ್ನು ನನ್ನ ಅಣ್ಣ ಮತ್ತು ತಮ್ಮ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆಯ ಸಮಯದಲ್ಲಿ ನನ್ನ ಅಣ್ಣ ತಮ್ಮಂದಿರು ನನ್ನ ಜೊತೆ ಮಾತನಾಡುತ್ತಿದ್ದರು. 2002 ನೇ ಸಾಲಿನಲ್ಲಿ ನನ್ನ ತಾಯಿಗೆ 60 ವರ್ಷ ವಯಸ್ಸಾಗಿತ್ತು. ನಮ್ಮ ಮದುವೆಯ ಸಮಯದಲ್ಲಿ ಫೋಟೋ ತೆಗೆಯಲಾಗಿತ್ತು. ಆ ಮದುವೆಯಲ್ಲಿ ನನ್ನ ಅಣ್ಣ ಮತ್ತು ತಮ್ಮ ಇರುವ ಬಗ್ಗೆ ಫೋಟೋದಲ್ಲಿ ತೆಗೆಯಲಾಗಿರುತ್ತದೆ. ನನ್ನ ಮದುವೆಯ ಸಮಯದಲ್ಲಿ ನನ್ನ ತಂದೆ ತಾಯಿಯರು ಹಾಗೂ ಇತರೇ ಹಿರಿಯರು ಮಾತುಕತೆ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ನಮ್ಮ ಮದುವೆಯ ಕಾಲಕ್ಕೆ ಏನು ಕೊಟ್ಟರು ಮತ್ತು ತೆಗೆದುಕೊಂಡರು ಎಂಬ ವಿಚಾರ

ನನಗೆ ಗೊತ್ತು. ಮದುವೆಯ ಕಾಲಕ್ಕೆ ನನ್ನ ತಂದೆ ತಾಯಿಯರು 2 ಬಂಗಾರದ ಬಳೆ ಮತ್ತು ಓಲೆಯನ್ನು ಕೊಟ್ಟಿರುತ್ತಾರೆ. ನನ್ನ ಮದುವೆಯು ಗೌರಿಬಿದನೂರು ತಾಲೂಕಿನ ವಿಧುರಶ್ವಥ ವಾಸವಿ ಕ್ಷೇತ್ರದಲ್ಲಿ ಆಯಿತು. ನನ್ನ ಮದುವೆಯನ್ನು ನನ್ನ ತಂದೆ ತಾಯಿ ಮತ್ತು ಅಣ್ಣ ತಮ್ಮಂದಿರು ಅದ್ದೂರಿಯಾಗಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಂದೆ ತಾಯಿಯರು ಮಾತ್ರ ಮಾಡಿಕೊಟ್ಟಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ. ಮದುವೆಯ ಕಾಲಕ್ಕೆ ನನ್ನ ತಂದೆ ತಾಯಿ ಮತ್ತು ಅಣ್ಣ ತಮ್ಮಂದಿರು ಸಾಲ ಮಾಡಿ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ 'ಎ' ಷೆಡ್ಯೂಲ್ ನಲ್ಲಿ ಒಟ್ಟು 3 ಆಸ್ತಿಗಳು ಇವೆ. ದಾವಾ ಆಸ್ತಿಗಳು ನನ್ನ ತಾತನಿಂದ ನನ್ನ ತಂದೆಗೆ ಬಂದಿರುವ ವಿಚಾರ ಮಾತ್ರ ನನಗೆ ಗೊತ್ತು. ಆದರೆ ನನ್ನ ತಾತ ಯಾರಿಂದ ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 'ಎ' ರ 1 ನೇ ಸ್ವತ್ತು ಎಷ್ಟು ವಿಸ್ತೀರ್ಣ ಇದೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 'ಎ' ರ 1 ನೇ ಸ್ವತ್ತು ಯಾರಿಂದ ನಮ್ಮ ಕುಟುಂಬದ ಸದಸ್ಯರಿಗೆ ಬಂತು ಎಂಬುದು ನನಗೆ ಗೊತ್ತಿಲ್ಲ. ಮುಂದುವರೆದು ಸಾಕ್ಷಿಯು, ನನ್ನ ತಾತನಿಂದ ನನ್ನ ತಂದೆಗೆ ಬಂತು ಎಂದು ಸ್ವತಃ ನುಡಿಯುತ್ತಾರೆ. ಈ ಆಸ್ತಿ ನಮ್ಮ ಕುಟುಂಬಕ್ಕೆ ಹೇಗೆ ಬಂತು ಎಂಬುದು ನನಗೆ ಗೊತ್ತಿಲ್ಲದೇ ಇರವುದರಿಂದ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಲರಾಮಶೆಟ್ಟಿ ಎಂಬುವವರು ನಮ್ಮ ತಾತ. ಅವರ ಹೆಂಡತಿ

ಹೆಸರು ಹನುಮಕ್ಕ. ನನ್ನ ತಾತನಿಗೆ ನನ್ನ ತಂದೆ ಮತ್ತು ಇಬ್ಬರು ಹೆಣ್ಣು ಮಕ್ಕಳಾದ ಭಾಗ್ಯಮ್ಮ ಮತ್ತು ಸೀತಾಲಕ್ಷ್ಮಿ ಎಂಬ ಮಕ್ಕಳುಗಳಿದ್ದರು. ಭಾಗ್ಯಮ್ಮ ಮತ್ತು ಸೀತಾಲಕ್ಷ್ಮಿ ರವರಿಗೆ ದಾವಾ 'ಎ' ಷೆಡ್ಯೂಲ್ ಆಸ್ತಿಗಳಲ್ಲಿ ಹಿಸ್ಸಾ ಹಕ್ಕಿದೆ ಎಂದರೆ ಸರಿ. ಆ ಭಾಗ್ಯಮ್ಮ ಮತ್ತು ಸೀತಾಲಕ್ಷ್ಮಿ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅವರನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಉದ್ದೇಶಪೂರ್ವಕವಾಗಿಯೇ ಅವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸೀತಾಲಕ್ಷ್ಮಿರವರು ಈಗ ಮೃತಪಟ್ಟಿದ್ದು, ಅವರಿಗೆ ಶೇಖರ್, ಹೇಮಲತಾ ಮತ್ತು ನಳಿನ ಎಂಬ ಮಕ್ಕಳುಗಳಿದ್ದಾರೆ. ಭಾಗ್ಯಮ್ಮರವರು ಈಗ ಜೀವಂತವಾಗಿದ್ದಾರೆ. ಸೀತಾಲಕ್ಷ್ಮಿರವರ ಮಕ್ಕಳಾದ ಶೇಖರ್, ಹೇಮಲತಾ ಮತ್ತು ನಳಿನರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ದಾವಾ 'ಎ' ಷೆಡ್ಯೂಲ್ ಆಸ್ತಿಗಳು ನನ್ನ ತಾತ ಬಲರಾಮಶೆಟ್ಟಿರವರ ಆಸ್ತಿಗಳಾಗಿರುತ್ತವೆ. ದಾವಾ 'ಎ' ಷೆಡ್ಯೂಲ್ ಆಸ್ತಿಗಳು ನನ್ನ ತಾತನಿಗೆ ಹೇಗೆ ಬಂದವು ಎಂಬುದು ನನಗೆ ಗೊತ್ತಿಲ್ಲ. ದಾವಾ 'ಎ' ಷೆಡ್ಯೂಲ್ ಆಸ್ತಿಗಳು ನನ್ನ ತಾತ ಬಲರಾಮಶೆಟ್ಟಿಗೆ ಸೇರಿದ ಆಸ್ತಿಗಳಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ 'ಎ' ಷೆಡ್ಯೂಲ್ ಆಸ್ತಿಗಳು ನನ್ನ ತಾತನಿಗೆ ಹೇಗೆ ಬಂದವು ಎಂಬ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು 2002 ನೇ ಸಾಲಿನಲ್ಲಿ

ಮದುವೆ ಆದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ನಾನು ನನ್ನ ಗಂಡನ ಮನೆಗೆ ಹೋದ ನಂತರ ಎಂದೂ ಸಹ ನನ್ನ ತವರು ಮನೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮದುವೆ ಆದ ನಂತರ ನನ್ನ ತಂದೆ, ತಾಯಿ, ಪ್ರತಿವಾದಿ ಮತ್ತು ನನ್ನ ತಮ್ಮ ಕೃಷ್ಣಾರವರ ನಡುವೆ ಬಾಯಿ ಮಾತಿ ಮೂಲಕ ಭಾಗ ಆಗಿತ್ತು ಎಂದರೆ ಸರಿಯಲ್ಲ. ದಾವಾ ಅನುಸೂಚಿ 'ಎ' ರ 4 ನೇ ಸ್ವತ್ತಿನ ಖಾತಾ ನಂಬರ್ ನನಗೆ ಗೊತ್ತಿಲ್ಲ. ಈ ಆಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂಬುದು ನನಗೆ ಗೊತ್ತಿಲ್ಲ. ಈ ಆಸ್ತಿಯನ್ನು ನನ್ನ ತಾಯಿಯವರು ಯಾವಾಗ ಖರೀದಿಸಿದರು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ತಾಯಿಯರು ಯಾವ ವರ್ಷ ಮೃತಪಟ್ಟರು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆ ತಾಯಿಯರು ಯಾವ ರೀತಿ ಮೃತಪಟ್ಟರು ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕೆ.ಇ.ಬಿ.ಯಲ್ಲಿ ಬಿಲ್ ಕಲೆಕ್ಟರ್ ಕೆಲಸ ಮಾಡಿಕೊಂಡು ಶಿಡ್ಲಗಟ್ಟದಲ್ಲಿ ವಾಸವಾಗಿರುತ್ತಾರೆ. ಅವರಿಗೆ ಒಳ್ಳೆಯ ಸಂಬಳ ಬರುತ್ತಿದೆ. ನನ್ನ ತಮ್ಮ ಮೃತ ಕೃಷ್ಣರವರು ಕೆ.ಇ.ಬಿ.ಯಲ್ಲಿ ಕೆಲಸ ಮಾಡುತ್ತಿದ್ದು, ಒಳ್ಳೆಯ ವೇತನ ಪಡೆಯುತ್ತಿದ್ದರು ಎಂದರೆ ಸರಿ.

ನನ್ನ ಮದುವೆ ಆದ ನಂತರ ನನ್ನ ತಂದೆ ತಾಯಿಯರು ದಾವಾ 'ಎ' ಷೆಡ್ಯೂಲ್ ಆಸ್ತಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ತಮ್ಮ ಕೃಷ್ಣಾರವರಿಗೆ ಕ್ಯಾನ್ಸರ್ ಖಾಯಿಲೆ ಆಗಿತ್ತು. ಅವರು ತುಮಕೂರಿನ ವಿನಾಯಕ ಆಸ್ಪತ್ರೆ ಮತ್ತು

ಬೆಂಗಳೂರಿನ ಕರುಣಾಶ್ರಯ ಆಸ್ಪತ್ರೆಗಳಲ್ಲಿ ದಾಖಲಾಗಿದ್ದರು. ಅವರು ಆಸ್ಪತ್ರೆಯಲ್ಲಿ ದಾಖಲಾಗಿದ್ದ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಹೇಳಿರುವುದಿಲ್ಲ. ಅವರು ಯಾವ ಯಾವ ವರ್ಷ ಈ ಮೇಲ್ಕಂಡ ಆಸ್ಪತ್ರೆಗಳಲ್ಲಿ ದಾಖಲಾಗಿದ್ದರು ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ನನ್ನ ತಮ್ಮ ಕೃಷ್ಣಪ್ಪರವರು 2022 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ನನ್ನ ವಾದ ಪತ್ರದ ಕಂಡಿಕೆ 5 ರಲ್ಲಿ ನನ್ನ ತಮ್ಮ ಕೃಷ್ಣರವರಿಗೆ ಪ್ರಜ್ಞೆ ಇರಲಿಲ್ಲ ಎಂದು ಹೇಳಿ ಬರೆಸಿರುವುದಿಲ್ಲ. ದಾವಾ 'ಬಿ' ಷೆಡ್ಯೂಲ್ ಆಸ್ತಿಗಳಲ್ಲಿ ಯಾವ ಯಾವ ಆಸ್ತಿಗಳು ಇವೆ ಎಂಬುದು ನನಗೆ ಗೊತ್ತು. ದಾವಾ 'ಎ' ಷೆಡ್ಯೂಲ್ ಆಸ್ತಿಗಳಲ್ಲಿರುವ 5 ಎಲ್.ಐ.ಸಿ. ಬಾಂಡ್ ಗಳು ನನ್ನ ತಮ್ಮನ ಹೆಸರಿನಲ್ಲಿವೆ. ಆ ಎಲ್ಲಾ ಎಲ್.ಐ.ಸಿ. ಬಾಂಡ್ ಗಳು ಮಧುಗಿರಿ ಶಾಖೆಗಳದ್ದಾಗಿರುತ್ತವೆ. ಆ ಎಲ್ಲಾ ಎಲ್.ಐ.ಸಿ. ಬಾಂಡ್‌ಗಳಲ್ಲಿಯೂ ಸಹ 1 ನೇ ಪ್ರತಿವಾದಿಯನ್ನು ನಾಮನಿರ್ದೇಶನ ಮಾಡಲಾಗಿರುತ್ತದೆ ಎಂದರೆ ಸರಿ. ಈ ವಿಚಾರ ನನಗೆ ಕೊನೆಯ ಹಂತದಲ್ಲಿ ಗೊತ್ತಾಯಿತು. ಈ ವಿಚಾರ ನನ್ನ ತಮ್ಮ ಕೃಷ್ಣ ಬದುಕಿದ್ದಾಗಲೇ ಗೊತ್ತಾಯಿತು.

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಓಎಸ್.321/2023

ಪಿಡಬ್ಲ್ಯು-1

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ